# ಮನ್ ಕಿ ಬಾತ್

**ಸಂಪುಟ 6**



# MANN KI BAAT
## VOL.6

**Authors**
Sarda Mohan and Tanushree Banerji

**Illustrations and Cover Art**
Dilip Kadam

**Assistant Artist**
Ravindra Mokate

**Production**
Amar Chitra Katha

**Published by**
Amar Chitra Katha Pvt. Ltd

KANNADA

ISBN – 978-81-966921-6-2

Amar Chitra Katha Pvt. Ltd, September 2023

© Ministry of Culture, Govt of India, September 2023
All rights reserved. This book is sold subject to the condition that the publication may not be reproduced, stored in a retrieval system (including but not limited to computers, disks, external drives, electronic or digital devices, e-readers, websites), or transmitted in any form or by any means (including but not limited to cyclostyling, photocopying, docutech or other reprographic reproductions, mechanical, recording, electronic, digital versions) without the prior written permission of the publisher, nor be otherwise circulated in any form of binding or cover other than that in which it is published and without a similar condition being imposed on the subsequent purchaser.

You can now get ACK stories as part of your classroom with **ACK Learn**,
a unique learning platform that brings these stories to your school with a range of workshops.
Find out more at **www.acklearn.com** or write to us at **acklearn@ack-media.com**.

ಸಮಸ್ಯೆಯೊಂದು ನಮಗೆ ಎದುರಾದಾಗ ನಾವು ಅದನ್ನು ಹೇಗೆ ಎದುರಿಸುತ್ತೇವೆ? ಕೆಲವರು ಸಮಸ್ಯೆಯನ್ನು ಕಡೆಗಣಿಸಬಹುದು, ಕೆಲವರು ಸಮಸ್ಯೆಯ ಬಗ್ಗೆ ಚಿಂತಿಸಿದರೂ ಏನನ್ನೂ ಮಾಡದೇ ಹೋಗಬಹುದು. ಕೆಲವರು ಸಮಸ್ಯೆಗೆ ಪರಿಹಾರವನ್ನು ಹುಡುಕಬಹುದು.

ಹೀಗೆ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿ ಹೊರಟವರಲ್ಲಿ ಬಬಿತಾ ರಾಜ್ಪೂತ್ ಕೂಡ ಒಬ್ಬರು.

ಬಬಿತಾರ ಹಳ್ಳಿಯಲ್ಲಿದ್ದ ಕೆರೆಯು ಬತ್ತಿ ಹೋಗಿ ಹಳ್ಳಿಯ ಜನರು ನೀರಿಗಾಗಿ ಬಹಳ ದೂರದವರೆಗೆ ನಡೆದು ಹೋಗಿ ತರಬೇಕಾಗಿತ್ತು. ಅಂತಹ ಸಂದರ್ಭದಲ್ಲಿ ಬಬಿತಾರವರು ತಮ್ಮ ಹಳ್ಳಿಯ ಕೆರೆಯು ಮತ್ತೆ ನೀರಿನಿಂದ ತುಂಬಿಕೊಳ್ಳುವಂತೆ ಮಾಡುವ ಸಾಹಸಕ್ಕೆ ಕೈ ಹಾಕಿದರು. ಆದರೆ, ಅವರೇನೂ ಬಕೆಟ್, ಕೊಡಗಳಿಂದ ನೀರು ತಂದು ಕೆರೆಗೆ ಸುರಿಯಲಿಲ್ಲ. ಬದಲಿಗೆ, ಹತ್ತಿರದಲ್ಲಿದ್ದ ಎತ್ತರದ ಬೆಟ್ಟವನ್ನು ಕೊರೆದು, ಕಾಲುವೆಯನ್ನು ನಿರ್ಮಿಸಿ, ಅದರಿಂದ ಹಳ್ಳಿಯ ಕೆರೆಗೆ ನೀರು ಹರಿದು ಬರುವಂತೆ ಮಾಡಿದರು.

ಅವರ ಈ ಬೃಹತ್ಕಾರ್ಯದಲ್ಲಿ ಸುಮಾರು 200 ಜನ ಮಹಿಳೆಯರು ಅವರ ನೆರವಿಗೆ ನಿಂತರು. ಅವರೆಲ್ಲಾ ತಮ್ಮನ್ನು 'ಜಲ್‌ಸಹೇಲಿ' ಎಂದು ಕರೆದುಕೊಂಡರು. ಅವರೆಲ್ಲಾ ಸೇರಿ ಸುಮಾರು 18 ತಿಂಗಳುಗಳ ಕಾಲ ಶ್ರಮಪಟ್ಟು ನೀರು ಹರಿಯಲು ಅನುವಾಗುವಂತೆ ಕಾಲುವೆಯನ್ನು ತೋಡಿದರು. ಅವರ ಈ ಶ್ರಮದಿಂದಾಗಿ ಕೇವಲ ಕೆರೆಯಷ್ಟೇ ನೀರಿನಿಂದ ತುಂಬಿಕೊಳ್ಳಲಿಲ್ಲ. ಅದರ ಜೊತೆಗೆ ಹಳ್ಳಿಯಲ್ಲಿದ್ದ ಕೊಳವೆ ಬಾವಿಗಳು ಕೂಡ ನೀರಿನಿಂದ ತುಂಬಿಕೊಂಡವು.

ಯಾವುದೇ ಸಮಸ್ಯೆಯನ್ನು ಕಡೆಗಣಿಸಿದ ಮಾತ್ರಕ್ಕೆ ಅದು ಇಲ್ಲವಾಗವುದಿಲ್ಲ. ಕಾಲ ಕಳೆದಂತೆ ಅದು ಮತ್ತಷ್ಟು ದೊಡ್ಡದಾಗಿ ಬೆಳೆಯುತ್ತಾ ಹೋಗುತ್ತದೆ.

ಸಮಸ್ಯೆಯ ಬಗ್ಗೆ ಕೇವಲ ಚಿಂತಿಸಿದರಷ್ಟೇ ಸಾಲದು. ಅದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಕೇವಲ ಚಿಂತಿಸುವುದು ಆರಾಮ ಕುರ್ಚಿಯಲ್ಲಿ ಕೂತು ಜೋರಾಗಿ ತೂಗಿದಂತೆ. ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ.



ಎಲ್ಲ ಸಮಸ್ಯೆಗಳಿಗೂ ಪರಹಾರವಿದ್ದೇ ಇರುತ್ತದೆ. ಪರಿಹಾರ ಹುಡಬೇಕಷ್ಟೆ, ನಿಮಗೆ ದೊರೆಯುತ್ತವೆ.

ನಿಮಗೆ ಜೀವನದಲ್ಲಿ ಸಮಸ್ಯೆಗಳು ಎದುರಾದಾಗ, ಅದರ ಎದುರು ನೀವು ಕುಂದದೇ ಅದನ್ನು ಎದುರಿಸುತ್ತೀರಿ ಎಂದು ನೀವು ನನಗೆ ಒಂದು ಭರವಸೆಯನ್ನು ಇಂದು ನೀಡಬೇಕು.

# ಪರಿವಿಡಿ


| | | |
|---|---|---|
| 1 | ಇಸ್ಮಾಯಿಲ್ ಭಾಯ್ ಶೇರು | 3 |
| 2 | ತೋಂಗ್‌ಬ್ರಾಮ್ ಬಿಜಿಯಶಾಂತಿ | 6 |
| 3 | ಕಲ್ಪನಾ | 9 |
| 4 | ಇ-ಪರಿಸರ | 12 |
| 5 | ಬಬಿತಾ ರಾಜ್‌ಪೂತ್ | 15 |
| 6 | ಶರ್ಮಿಳಾ ಓಸ್ವಾಲ್ | 18 |
| 7 | ಬಿಜಯ್ ಕುಮಾರ್ ಕಬಿ | 21 |
| 8 | ಸಿಲು ನಾಯಕ್ | 24 |
| 9 | ಸೇಂಟ್ ತೆರೇಸಾ ಕಾಲೇಜು | 27 |
| 10 | ಕಮಲಾ ಮೊಹರಾಣ | 30 |

# ಇಸ್ಮಾಯಿಲ್ ಭಾಯ್ ಶೇರು



ಅದು ನಾಯರ್ ಸರ್ ಅವರ ತರಗತಿಯಾಗಿತ್ತು. ವಿದ್ಯಾರ್ಥಿಗಳು ಮತ್ತೊಂದು ಮನ್ ಕಿ ಬಾತ್ ಕಥೆಗಾಗಿ ಕಾಯುತ್ತಿದ್ದರು.
ಅತಿಯಾದ ಮಳೆಯಿಂದಾಗಿ ರೈತರಿಗೆ ಆಗಿರುವ ನಷ್ಟದ ಬಗ್ಗೆ ನೀವು ಓದಿದ್ದೀರಾ?
ಹೌದು, ಕೆಟ್ಟ ಹವಾಮಾನವು ಇಡೀ ಬೆಳೆಯನ್ನು ಹೇಗೆ ಹಾಳುಮಾಡುತ್ತದೆ ಎಂದು ನನ್ನ ತಂದೆ ಹೇಳುತ್ತಿದ್ದರು.
ಪೂಜಾ, ನಿನ್ನ ತಂದೆ ಹೇಳಿದ್ದು ಸರಿ. ಕೃಷಿಯು ಒಂದು ಅಪಾಯಕಾರಿ ವೃತ್ತಿಯಾಗಿದೆ...
...ಆದರೆ ಇಂದಿನ ಕಥೆಯು ನವೀನತೆಯನ್ನು ಅಳವಡಿಸಿಕೊಂಡು, ಕೃಷಿಯು ತುಂಬಾ ಲಾಭದಾಯಕ ಎಂಬುದನ್ನು ಸಾಬೀತುಪಡಿಸಿದ ರೈತನ ಕುರಿತದ್ದಾಗಿದೆ. ಆ ರೈತ, ಇಸ್ಮಾಯಿಲ್ ಭಾಯ್ ಶೇರು, ಗುಜರಾತಿನ ರಾಂಪುರ ಗ್ರಾಮದವರು.
ಇಸ್ಮಾಯಿಲ್ ಅವರು ಕೃಷಿ ಕುಟುಂಬದಲ್ಲಿ ಜನಿಸಿದ್ದರು.
ರಸಗೊಬ್ಬರವು ಸಮವಾಗಿ ಹರಡಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.
ನಾನು ದೊಡ್ಡವನಾದ ಮೇಲೆ ಅಪ್ಪನಂತೆಯೇ ರೈತನಾಗುತ್ತೇನೆ.


ಅಲ್ಲಿ ಸಮಸ್ಯೆಗಳೂ ಇದ್ದವು.
ಈ ವರ್ಷವೂ ಮಳೆ ಕೈಕೊಟ್ಟಿದೆ. ಕಾರ್ಮಿಕರ ವೇತನವನ್ನು ಪಾವತಿಸಿದ ನಂತರ ನಮಗೆ ಏನೂ ಉಳಿಯುವುದಿಲ್ಲ.
ಕಳೆದ ಎರಡು ವರ್ಷಗಳಿಂದ ಇದೇ ಪರಿಸ್ಥಿತಿ. ಈ ನಷ್ಟಗಳನ್ನು ನಾವು ಹೇಗೆ ಸರಿಪಡಿಸಿಕೊಳ್ಳುವುದು?
ಇಸ್ಮಾಯಿಲ್ ದೊಡ್ಡವನಾದಂತೆ ಅವನಿಗೆ ಕೃಷಿಯತ್ತ ಒಲವು ಬೆಳೆಯಿತು.
ಅಪ್ಪಾ, ನಾನು ಈಗ ಕೃಷಿ ಕೆಲಸದಲ್ಲಿ ಸಹಾಯ ಮಾಡುವಷ್ಟು ದೊಡ್ಡವನಾಗಿದ್ದೇನೆ.
ಮಗನೇ, ಜಮೀನಿನಲ್ಲಿ ಯಾವಾಗಲೂ ನಷ್ಟವೇ ಹೊರತು ಲಾಭ ಇಲ್ಲ. ನಾನು ಈಗಾಗಲೇ ಎಷ್ಟು ಸಾಲ ಮಾಡಿದ್ದೇನೆ ಎಂದು ನಿನಗೆ ತಿಳಿದಿಲ್ಲವೇ? ನಗರಕ್ಕೆ ಹೋಗಿ ಒಳ್ಳೆಯ ಕೆಲಸ ಹುಡುಕಿಕೋ.
ಎಲ್ಲರೂ ಇಸ್ಮಾಯಿಲ್‌ನ ಕನಸುಗಳನ್ನು ವಿರೋಧಿಸಿದರು...
ನೀನು ನಿನ್ನ ಹೆತ್ತವರ ಮಾತನ್ನು ಕೇಳಬೇಕು. ಕೃಷಿಯಲ್ಲಿ ತೊಡಗಿಸಿಕೊಳ್ಳಬೇಡ.
...ಆದರೆ ಅವನು ಅವರ ಮಾತನ್ನು ಕೇಳಲಿಲ್ಲ.
ಎಲ್ಲರೂ ಹೀಗೆ ಯೋಚಿಸಿದರೆ ರೈತರು ಇರುವುದೇ ಇಲ್ಲ! ಕೃಷಿ ಈಗಲೂ ಲಾಭದಾಯಕ ಉದ್ಯಮ ಎಂಬುದನ್ನು ನಾನು ಜಗತ್ತಿಗೆ ಸಾಬೀತುಪಡಿಸುತ್ತೇನೆ.
ಇಸ್ಮಾಯಿಲ್ ತನ್ನ ಜಮೀನಿನಲ್ಲಿ ಆಲೂಗಡ್ಡೆ ಬೆಳೆಯಲು ಹೊಸ ವಿಧಾನಗಳನ್ನು ಅನುಸರಿಸಲಾರಂಭಿಸಿದನು.
ನಾನು ತುಂತುರು ನೀರಾವರಿಯಿಂದ ಹನಿ ನೀರಾವರಿಗೆ ಬದಲಾವಣೆ ಮಾಡಿದ್ದೇನೆ. ಇದರಲ್ಲಿ ನೀರು ವ್ಯರ್ಥವಾಗುವುದಿಲ್ಲ ಮತ್ತು ರಸಗೊಬ್ಬರಗಳು ಸರಿಯಾಗಿ ಬಳಕೆಯಾಗುತ್ತವೆ.
ಇದೊಂದು ಅದ್ಭುತ ಉಪಾಯ, ಇಸ್ಮಾಯಿಲ್!


ಇವರ ಆವಿಷ್ಕಾರವು ಯಶಸ್ವಿಯಾಯಿತು ಮತ್ತು ಸ್ವಲ್ಪ ಸಮಯದಲ್ಲೇ ಅವರು ಉತ್ತಮ ಗುಣಮಟ್ಟದ ಆಲೂಗಡ್ಡೆಗೆ ಹೆಸರುವಾಸಿಯಾದರು.
ಈ ವರ್ಷ ಉತ್ತಮ ಇಳುವರಿ ಬಂದಿದೆ. ಕಡಿಮೆಗೊಳಿಸಿದ ವೆಚ್ಚಗಳಿಂದಾಗಿ, ನಾನು ಉತ್ತಮ ಲಾಭವನ್ನು ಗಳಿಸುವಲ್ಲಿ ಯಶಸ್ವಿಯಾಗಿದ್ದೇನೆ.
ತಾನು ಬೆಳೆದ ಬೆಳೆಯನ್ನು ಮಾರುವ ಸಮಯ ಬಂದಾಗ -
ಇಸ್ಮಾಯಿಲ್ ರವರೇ, ನಿಮ್ಮೊಂದಿಗೆ ವ್ಯಾಪಾರ ಮಾಡುವುದು ನನಗೆ ಸಂತೋಷದ ವಿಷಯವಾಗಿದೆ. ನೀವು ನಮ್ಮ ಕಂಪನಿಯನ್ನು ನೇರವಾಗಿ ಸಂಪರ್ಕಿಸಿದ್ದು ನನಗೆ ಖುಷಿ ತಂದಿತು.
ಹೌದು, ಮಧ್ಯವರ್ತಿಗಳಿಂದ ರೈತರು ಹೆಚ್ಚು ಹಣವನ್ನು ಕಳೆದುಕೊಳ್ಳುತ್ತಾರೆ ಎಂಬುದನ್ನು ನಾನು ಅರಿತುಕೊಂಡೆನು.
ಅಂದಿನಿಂದ, ಇಸ್ಮಾಯಿಲ್ ತನ್ನ ಉತ್ತಮ ಗುಣಮಟ್ಟದ ಬೆಳೆಯನ್ನು ಮಧ್ಯವರ್ತಿಗಳಿಲ್ಲದೆ ಹಲವಾರು ದೊಡ್ಡ ಕಂಪನಿಗಳಿಗೆ ಮಾರಾಟ ಮಾಡಿದನು.
ಅಪ್ಪಾ, ಈ ವರ್ಷದ ಲಾಭದಿಂದ ನಾನು ನಿಮ್ಮ ಹಳೆಯ ಸಾಲವನ್ನು ತೀರಿಸಿದ್ದೇನೆ. ನೀವು ಈಗ ಯಾವುದರ ಬಗ್ಗೆಯೂ ಚಿಂತಿಸಬೇಕಾಗಿಲ್ಲ.
ಮಗನೇ, ನಿನ್ನ ಬಗ್ಗೆ ನನಗೆ ತುಂಬಾ ಹೆಮ್ಮೆ ಎನಿಸುತ್ತಿದೆ.
ಈಗ ಇಸ್ಮಾಯಿಲ್ ಇತರ ರೈತರಿಗೆ ಹೊಸ ಆವಿಷ್ಕಾರಗಳನ್ನು ಜಾರಿಗೆ ತರಲು ಮತ್ತು ಅವರ ಕೃಷಿಯನ್ನು ಹೆಚ್ಚು ಲಾಭದಾಯಕವಾಗಿಸಲು ಸಹಾಯ ಮಾಡುತ್ತಿದ್ದಾರೆ.
ಪ್ರಧಾನಿ ಮೋದಿಯವರು ತಮ್ಮ ರೇಡಿಯೋ ಕಾರ್ಯಕ್ರಮದಲ್ಲಿ, ಇಸ್ಮಾಯಿಲ್ ರವರ ರೈತರ ಜೀವನವನ್ನು ಬದಲಾಯಿಸುವ ಪ್ರಯತ್ನಗಳು ಮತ್ತು ಕೆಲಸವನ್ನು ಶ್ಲಾಘಿಸಿದರು.

# ತೋಂಗ್‌ಬ್ರಾಮ್ ಬಿಜಿಯಶಾಂತಿ




*ಮಣಿಪುರದ ಬಿಷ್ಣುಪುರದಲ್ಲಿರುವ ಒಂದು ಸಿಹಿನೀರಿನ ಸರೋವರ


ಬಿಜಿಯಶಾಂತಿ ಅವರು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ ಆಯೋಜಿಸಿದ್ದ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮಕ್ಕೆ ಸೇರಿದರು.
ಸಸ್ಯಗಳ ಔಷಧೀಯ ಮತ್ತು ಸುಗಂಧಭರಿತ ಲಕ್ಷಣಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ನಾನು ಕೆಲವು ತರಗತಿಗಳಿಗೆ ಸೇರಿಕೊಳ್ಳಬೇಕು.


ಹೊಸ ಜ್ಞಾನದೊಂದಿಗೆ 2018 ರಲ್ಲಿ, ಬಿಜಿಯಶಾಂತಿ ನೂಲು ತಯಾರಿಸಲು, ಕಮಲದ ಗಿಡದ ಕಾಂಡದಿಂದ ನಾರನ್ನು ತೆಗೆಯಲು ಪ್ರಾರಂಭಿಸಿದರು.
ಬನ್ನಿ, ಇದನ್ನು ಹೇಗೆ ಮಾಡುವುದೆಂದು ನಾನು ನಿಮಗೆ ಕಲಿಸುತ್ತೇನೆ.
ಆರಂಭದಲ್ಲಿ, ಈಕೆ ಹತ್ತು ಸ್ಥಳೀಯ ಮಹಿಳೆಯರ ತಂಡದೊಂದಿಗೆ ಈ ಕೆಲಸವನ್ನು ಪ್ರಾರಂಭಿಸಿದರು.


ಬಿಜಿಯಶಾಂತಿ ನಂತರ 'ಸನಾಜಿಂಗ್ ಸನಾ ಥಂಬಲ್' ಎಂಬ ಉದ್ಯಮವನ್ನು ಪ್ರಾರಂಭಿಸಿದರು ಮತ್ತು ತಮ್ಮ ಹಳ್ಳಿಯ ಇತರ ಮಹಿಳೆಯರಿಗೂ ಈ ವಿಧಾನವನ್ನು ಕಲಿಸಲು ಪ್ರಾರಂಭಿಸಿದರು.
ಮೊದಲಿಗೆ, ನಾರನ್ನು ತೆಗೆಯಲು ನಾವು ಕಮಲದ ಕಾಂಡವನ್ನು ಒಡೆಯುತ್ತೇವೆ.


ನಮ್ಮ ಅಂಗೈ ಮತ್ತು ಹಲಗೆಯನ್ನು ಬಳಸಿ, ನಂತರ ನಾವು ನಾರನ್ನು ಹೊಸೆಯುತ್ತೇವೆ.


ಇದರಿಂದ ನಾವು ತಯಾರಿಸಿದ ನೂಲನ್ನು ಮಗ್ಗದಲ್ಲಿ ನೇಯಲಾಗುತ್ತದೆ.




*ಮಣಿಪುರದಾದ್ಯಂತ ಉದ್ಯಮಶೀಲತೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸುವ ಸರ್ಕಾರಿ ಯೋಜನೆ.

# ಕಲ್ಪನಾ




*ಉತ್ತರಾಖಂಡದಲ್ಲಿ


ಈ ಸಮಸ್ಯೆಗೆ ಉತ್ತರವು 2017 ರಲ್ಲಿ ಸಂದರ್ಶಕರ ರೂಪದಲ್ಲಿ ಬಂದಿತು.
ನನ್ನ ಹೆಸರು ಪ್ರೊಫೆಸರ್ ತಾರಾಮೂರ್ತಿ. ನಾನು ಇಲ್ಲಿ ಅಧ್ಯಯನ ಪ್ರವಾಸಕ್ಕೆ ಬಂದಿದ್ದೇನೆ. ನನ್ನ ಕೆಲಸ ಮುಗಿಯುವವರೆಗೆ ನನಗೆ ನಿಮ್ಮ ಮನೆಯಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ನೀಡಬಹುದೇ?
ಖಂಡಿತಾ. ನಮ್ಮ ಮನೆಗೆ ಸ್ವಾಗತ.
ತಿಂಗಳುಗಳು ನಂತರ-
ಪ್ರೊಫೆಸರ್, ನೀವು ಪ್ರಸ್ತುತ ಓದುತ್ತಿರುವ ಪುಸ್ತಕದ ಬಗ್ಗೆ ನನಗೆ ಹೇಳುವಿರಾ?
ಇವರು ತುಂಬಾ ಓದಿದವರಾಗಿದ್ದಾರೆ. ಬಹುಶಃ ಇವರಿಂದ ಕಲ್ಪನಾಗೆ ಸಹಾಯವಾಗಬಹುದು.
ನನ್ನ ಮೊಮ್ಮಗಳಿಗೆ ಒಂದು ಒಳ್ಳೆಯ ಶಾಲೆಯನ್ನು ಹುಡುಕುತ್ತಿದ್ದೇನೆ. ನೀವು ಯಾವುದಾದರು ಶಾಲೆಯನ್ನು ಸೂಚಿಸಬಹುದೇ?
ನಿಮಗೆ ನನ್ನ ಮೇಲೆ ನಂಬಿಕೆಯಿದ್ದರೆ ಅವಳನ್ನು ನನ್ನೊಂದಿಗೆ ಕರ್ನಾಟಕಕ್ಕೆ ಕರೆದುಕೊಂಡು ಹೋಗುತ್ತೇನೆ. ನಾನು ಅವಳಿಗೆ ಸೂಕ್ತವಾದದ್ದನ್ನು ಹುಡುಕುತ್ತೇನೆ.
ಪ್ರೊಫೆಸರ್ ತಾರಾಮೂರ್ತಿ, ಕಲ್ಪನಾಳನ್ನು ಮೈಸೂರಿನ ರಂಗರಾವ್ ಸ್ಮಾರಕ ವಿಶೇಷ ಚೇತನರ ವಸತಿ ಶಾಲೆಗೆ ಸೇರಿಸಿದರು.
RANGA RAO MEMORIAL SCHOOL
ಇದು ತುಂಬಾ ರೋಮಾಂಚನಕಾರಿಯಾಗಿದೆ! ಇದು ನಾನು ಯಾವಾಗಲೂ ಬಯಸುತ್ತಿದ್ದ ಹೊಸ ಆರಂಭ.













*10ನೇ ತರಗತಿಯ ಪಬ್ಲಿಕ್ ಪರೀಕ್ಷೆ ಉತ್ತೀರ್ಣರಾದವರಿಗೆ ನೀಡುವ ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್

^ಇಂಡಿಯನ್ ಅಡ್ಮಿನಿಸ್ಟ್ರೇಟೀವ್ ಸರ್ವೀಸ್

# ಇ-ಪರಿಸರ




*ಒಂದು ಲೋಹವನ್ನು ಇನ್ನೊಂದು ಲೋಹದಿಂದ ಲೇಪಿಸುವ ಪ್ರಕ್ರಿಯೆ


ಈ ಲೋಹಗಳನ್ನು ಹೊರತೆಗೆಯುವ ಸರಿಯಾದ ವಿಧಾನ ಅವರಿಗೆ ತಿಳಿದಿಲ್ಲದ ಕಾರಣ, ಅವರು ಅವುಗಳನ್ನು ಪುಡಿಮಾಡಿ ನಂತರ ಉಳಿದ ತ್ಯಾಜ್ಯವನ್ನು ಸುಡುತ್ತಾರೆ ಅಥವಾ ಜಲಮೂಲಗಳಿಗೆ ಎಸೆಯುತ್ತಾರೆ.
ಇದರಿಂದ ಪಾದರಸ ಮತ್ತು ಸೀಸದಂತಹ ಹೆಚ್ಚು ವಿಷಕಾರಿ ರಾಸಾಯನಿಕಗಳು ನೀರಿಗೆ ಅಥವಾ ವಾತಾವರಣಕ್ಕೆ ಸೇರಲು ಕಾರಣವಾಗುತ್ತದೆ. ನಂತರ ನಾವು ಅದೇ ಗಾಳಿಯನ್ನು ಉಸಿರಾಡುತ್ತೇವೆ ಮತ್ತು ಅದೇ ನೀರನ್ನು ಕುಡಿಯುತ್ತೇವೆ!
ಇ-ತ್ಯಾಜ್ಯವು ಪರಿಸರವನ್ನು ಕಲುಷಿತಗೊಳಿಸುತ್ತದೆ ಮತ್ತು ವಿಷಪೂರಿತಗೊಳಿಸುತ್ತದೆ ಎಂಬುದು ನನಗೆ ತಿಳಿದಿರಲಿಲ್ಲ!
ಖಂಡಿತಾ ಹಾನಿಯಾಗುತ್ತಿದೆ. ಇ-ತ್ಯಾಜ್ಯವನ್ನು ಉತ್ಪಾದಿಸುವಲ್ಲಿ ಭಾರತವು ವಿಶ್ವದಲ್ಲಿ ಮೂರನೇ ಸ್ಥಾನದಲ್ಲಿದೆ. ಆದರೆ ಇದರ ಸರಿಯಾದ ವಿಲೇವಾರಿ ಬಗ್ಗೆ ಯಾವುದೇ ಜಾಗೃತಿ ಇಲ್ಲ.
*2005 ರಲ್ಲಿ, ಪಾರ್ಥಸಾರಥಿ 'ಇ-ಪರಿಸರ' ಎಂಬ ಇ-ತ್ಯಾಜ್ಯ ಮರುಬಳಕೆ ಕಂಪನಿಯನ್ನು ಪ್ರಾರಂಭಿಸಿದರು.*
ನಾವು ಅಪಾಯಕಾರಿ ವಸ್ತುಗಳನ್ನು ಪ್ರತ್ಯೇಕಿಸುತ್ತೇವೆ, ಗಾಜು, ಲೋಹ ಮತ್ತು ಪ್ಲಾಸ್ಟಿಕ್‌ನಂತಹ ಕಚ್ಚಾ ವಸ್ತುಗಳನ್ನು ಬೇರೆ ಬೇರೆ ಮಾಡುತ್ತೇವೆ, ನಂತರ ಅವುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಮರುಬಳಕೆ ಮಾಡುತ್ತೇವೆ.
E-Parisaraa Pvt.Ltd


ಈ ಕೆಲಸವನ್ನು ಮಾಡಲು ಇ-ಪರಿಸರ ಸ್ವಲ್ಪವೇ ಸಮಯದಲ್ಲಿ ಸರಳ, ಸುರಕ್ಷಿತ ಮತ್ತು ಪರಿಸರ ಸ್ನೇಹಿ ವಿಧಾನಗಳನ್ನು ರೂಪಿಸಿತು.
ನೋಡಿ ಸರ್, ನಾವು ಲಿಥಿಯಂ ಬ್ಯಾಟರಿಗಳಿಂದ ಅಲ್ಯೂಮಿನಿಯಂ ಮತ್ತು ತಾಮ್ರವನ್ನು ತೆಗೆದುಕೊಂಡಿದ್ದೇವೆ.
ಹಳೆಯ ಕಂಪ್ಯೂಟರುಗಳ ಮುದ್ರಿತ ಸರ್ಕ್ಯೂಟ್ ಬೋರ್ಡುಗಳಿಂದ ಅಮೂಲ್ಯ ಲೋಹಗಳನ್ನು ಪ್ರತ್ಯೇಕಿಸಲು ನಾವು ಒಂದು ಮಾರ್ಗವನ್ನು ಕಂಡುಕೊಂಡಿದ್ದೇವೆ.
ಮತ್ತು ಈ ಕೆಲಸವನ್ನು ಶೂನ್ಯ ಮಾಲಿನ್ಯದೊಂದಿಗೆ ಮಾಡುತ್ತಿದ್ದೇವೆ! ನಿನ್ನ ಬಗ್ಗೆ ನನಗೆ ಹೆಮ್ಮೆಯಿದೆ.
ಇ-ಪರಿಸರವು ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಅನುಮೋದನೆ ಪಡೆದ ಮೊದಲ ಇ-ತ್ಯಾಜ್ಯ ಮರುಬಳಕೆ ಸಂಸ್ಥೆಯಾಗಿದೆ.
ಹೀಗೆ ಪ್ರತ್ಯೇಕಿಸಿದ ಲೋಹಗಳನ್ನು ಆಭರಣಗಳು, ಪೆನ್ನುಗಳು ಮತ್ತು ಇತರ ವಸ್ತುಗಳಿಗೆ ಲೇಪನ ಮಾಡಲು ಬಳಸಲಾಗುತ್ತದೆ.
ತುಂಬಾ ಉತ್ತಮವಾದ ಯೋಜನೆ!
2010 ರಲ್ಲಿ ಇ-ಪರಿಸರ ಸಂಸ್ಥೆಗೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯವು ಅತ್ಯುತ್ತಮ ಉದ್ಯಮಶೀಲತೆಗಾಗಿ ನೀಡುವ ರಾಷ್ಟ್ರೀಯ ಪ್ರಶಸ್ತಿಗಳಲ್ಲಿ, ಮೊದಲ ಬಹುಮಾನವನ್ನು ನೀಡಿತು.
MICRO, SMALL & MEDIUM ENTERPRISES
CHIEF GUEST
SMT. PRATIBHA DEVI SINGH PATIL
ನಂತರ ಇತರ ಪ್ರಶಸ್ತಿಗಳು ಮತ್ತು ಮನ್ನಣೆಗಳು ದೊರೆತವು. 2023 ರಲ್ಲಿ, ಪ್ರಧಾನಿ ನರೇಂದ್ರ ಮೋದಿಯವರು ಮನ್ ಕಿ ಬಾತ್‌ನಲ್ಲಿ ಇವರ ಪ್ರಯತ್ನಗಳನ್ನು ಶ್ಲಾಘಿಸಿದರು.
ಇ-ತ್ಯಾಜ್ಯವನ್ನು ಮರುಬಳಕೆ ಮಾಡಲು ನಾವು ಇನ್ನೂ ಉತ್ತಮ ಮಾರ್ಗಗಳನ್ನು ಹುಡುಕುವುದನ್ನು ಮುಂದುವರಿಸುತ್ತೇವೆ. ನಿಮ್ಮ ಇ-ತ್ಯಾಜ್ಯವನ್ನು ಸಂಗ್ರಹಣಾ ಕೇಂದ್ರಗಳಲ್ಲಿ ಮಾತ್ರ ವಿಲೇವಾರಿ ಮಾಡುವ ಮೂಲಕ ನೀವು ಸಹಾಯ ಮಾಡಬಹುದು, ಇದರಿಂದ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಮಾಲಿನ್ಯಗೊಳಿಸದೆ ಮರುಬಳಕೆ ಮಾಡಬಹುದು.

# ಬಬಿತಾ ರಾಜ್‌ಪೂತ್



ಬೇಸಿಗೆ ರಜೆ ಮುಗಿದು, ಶಾಲೆಯ ಮೊದಲ ದಿನವಾಗಿತ್ತು.
ನಿನ್ನ ರಜಾ ದಿನಗಳು ಹೇಗಿದ್ದವು ಪೂಜಾ?
ಕೇಳಬೇಡ ಶ್ರೇಯಸ್. ನಮ್ಮ ನೆರೆಹೊರೆಯಲ್ಲಿ ಇಡೀ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಇತ್ತು.
ಹೌದು, ನಮ್ಮಲ್ಲಿಯೂ ಕೂಡ! ಹೀಗಾಗಿ ನಮ್ಮ ಕುಟುಂಬದವರು ಸ್ವಲ್ಪ ಸಮಯದವರೆಗೆ ನನ್ನ ಚಿಕ್ಕಪ್ಪನ ಊರಿಗೆ ಹೋಗಿ ಉಳಿದುಕೊಂಡಿದ್ದೆವು.
ಆದರೆ ದಿನೇಶ್, ವರ್ಷವಿಡೀ ನೀರಿನ ಕೊರತೆಯನ್ನು ಎದುರಿಸುವ ಜನರ ಬಗ್ಗೆ ನೀನು ಯೋಚಿಸಿದ್ದೀಯಾ?
ಇಂದು, ನಾನು ನಿಮಗೆ ಮನ್ ಕಿ ಬಾತ್ ಕಥೆಯನ್ನು ಹೇಳಲಿದ್ದು, ತನ್ನ ಹಳ್ಳಿಗೆ ನೀರು ತರಲು, ನಿಮಗಿಂತ ಹೆಚ್ಚೇನು ದೊಡ್ಡವಳಲ್ಲದ ಯುವತಿಯೊಬ್ಬಳು ಬೆಟ್ಟವನ್ನು ಅಗೆಯಬೇಕಾಯಿತು.
ಮಧ್ಯಪ್ರದೇಶದ ಛತ್ತರ್‌ಪುರ ಜಿಲ್ಲೆಯ ಅಗ್ರೋಥಾ ಗ್ರಾಮದಲ್ಲಿ -
ಕಳೆದ ಎರಡು ವರ್ಷಗಳಿಂದ ನಮಗೆ ಮಳೆಯೇ ಆಗುತ್ತಿಲ್ಲ. ಪ್ರತಿದಿನ, ನಾವು ನಮ್ಮ ಅರ್ಧದಷ್ಟು ಸಮಯವನ್ನು ನೀರು ತರಲು ದೂರದ ಸ್ಥಳಕ್ಕೆ ನಡೆದುಕೊಂಡು ಹೋಗಿ ಬರುವುದರಲ್ಲೇ ಕಳೆಯುತ್ತಿದ್ದೇವೆ.
ನನ್ನ ಮಕ್ಕಳು ಇನ್ನು ಮುಂದೆ ಶಾಲೆಗೆ ಹೋಗಲು ಸಾಧ್ಯವಿಲ್ಲ, ಏಕೆಂದರೆ ನೀರು ತರಲು ನನಗೆ ಸಹಾಯ ಬೇಕು. ಇದು ಹೀಗೆಯೇ ಮುಂದುವರೆದರೆ ಬಹಳ ಕಷ್ಟ.
19 ವರ್ಷದ ಬಬಿತಾ ರಾಜ್‌ಪೂತ್ ಬಹಳ ವಿಚಲಿತಳಾಗಿದ್ದರು.
ನಮ್ಮಲ್ಲಿ 90 ಎಕರೆ ವಿಸ್ತೀರ್ಣದ ಕೆರೆ ಇದ್ದರೂ ಮಳೆಯಿಲ್ಲದೆ ಅದು ಬತ್ತಿ ಹೋಗಿದೆ. ಮಹಿಳೆಯರು ತಮ್ಮ ಮೂಲಭೂತ ಅವಶ್ಯಕತೆಗಳಿಗೆ ನೀರು ತರಲು ಹರಸಾಹಸ ಪಡುತ್ತಿದ್ದಾರೆ. ಗ್ರಾಮದ ಹಿರಿಯರು ಸಹ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ.


ಒಂದು ದಿನ ಊರಿನ ಮಹಿಳೆಯರೆಲ್ಲ ಸೇರಿ ಈ ಸಮಸ್ಯೆಯ ಬಗ್ಗೆ ಚರ್ಚಿಸಿದರು.
ಕೆರೆಯ ಮರುಪೂರಣಕ್ಕೆ ನಾವು ಮಾರ್ಗೋಪಾಯ ಕಂಡುಕೊಳ್ಳಬೇಕಿದೆ. ಹತ್ತಿರದ ಕಾಲುವೆಯ ನೀರನ್ನು ನಾವು ಏಕೆ ಬಳಸಬಾರದು?
ಬಬಿತಾ, ಬೆಟ್ಟದ ಇನ್ನೊಂದು ಬದಿಯಲ್ಲಿ ಕಾಲುವೆ ಇದೆ. ಅಲ್ಲಿಂದ ಇಲ್ಲಿಗೆ ನೀರನ್ನು ತರಲು ನಾವು ಬೆಟ್ಟವನ್ನು ಅಗೆಯಬೇಕು.


ಇದು ನಿಜಕ್ಕೂ ಕಷ್ಟದ ಕೆಲಸ. ಆದರೆ ಪ್ರತಿದಿನ ಗಂಟೆಗಟ್ಟಲೆ ಮೇಲೆ ಕೆಳಗೆ ನಡೆಯುವುದಕ್ಕಿಂತ ಇದು ಉತ್ತಮವಲ್ಲವೇ?
ಬೆಟ್ಟವು ಸರಕಾರಕ್ಕೆ ಸೇರಿದ್ದು. ನಾವು ನೀರಿನ ಮಾರ್ಗ ಅಗೆಯಲು ಒಪ್ಪಿದರೂ ಅರಣ್ಯ ಇಲಾಖೆಯ ಅನುಮತಿ ಇಲ್ಲದೆ ಹಾಗೆ ಮಾಡುವಂತಿಲ್ಲ.


ಬಬಿತಾ ನೇತೃತ್ವದಲ್ಲಿ ಮಹಿಳೆಯರು, ಕಾಲುವೆಯಿಂದ ಕೆರೆಗೆ ನೀರು ಬರುವಂತೆ ಕಾಲುವೆ ನಿರ್ಮಿಸಲು ಅಗತ್ಯ ಅನುಮತಿಗಳನ್ನು ಪಡೆಯಲು ನಿರ್ಧರಿಸಿದರು.
ಆದರೂ, ಅಧಿಕಾರಿಗಳೊಂದಿಗೆ ವ್ಯವಹರಿಸುವುದು ಮಹಿಳೆಯರು ಊಹಿಸಿದ್ದಕ್ಕಿಂತ ಕಷ್ಟಕರವಾಗಿತ್ತು.


ಅದೃಷ್ಟವಶಾತ್, ಪರಮಾರ್ಥ ಸಮಾಜ ಸೇವಾ ಸಂಸ್ಥೆ ಎಂಬ ಎನ್.ಜಿ.ಓ ಸದಸ್ಯರು ಗ್ರಾಮಕ್ಕೆ ಭೇಟಿ ನೀಡಿದರು.
ಮೇಡಮ್, ಮಹಿಳೆಯರು ಬೆಟ್ಟವನ್ನು ಅಗೆಯಲು ಸಿದ್ಧರಾಗಿದ್ದಾರೆ. ಆದರೆ ಗ್ರಾಮದ ಹಿರಿಯರು ಹಾಗೂ ಅರಣ್ಯಾಧಿಕಾರಿಗಳು ತೊಡಕಾಗಿ ನಿಂತಿದ್ದಾರೆ.
ಮಹಿಳೆಯರಾದ ನೀವು ಅತ್ಯುತ್ತಮ ಇಚ್ಛಾಶಕ್ತಿಯನ್ನು ತೋರಿಸಿದ್ದೀರಿ. ಅಗತ್ಯ ದಾಖಲೆಗಳನ್ನು ಸಿದ್ಧಪಡಿಸಿ, ಅನುಮತಿ ಪಡೆಯಲು ನಾವು ನಿಮಗೆ ಸಹಾಯ ಮಾಡುತ್ತೇವೆ.




*ಜಲ ಸಹೇಲಿಯರು (ಸ್ನೇಹಿತೆಯರು)- ಈ ಯೋಜನೆಯಲ್ಲಿ ಕೆಲಸ ಮಾಡುವ ಹಳ್ಳಿಯ ಮಹಿಳಾ ಗುಂಪಿನ ಹೆಸರು

# ಶರ್ಮಿಳಾ ಓಸ್ವಾಲ್
















*ರಾಗಿ ಮುದ್ದೆ
^ಸಜ್ಜೆ ರೊಟ್ಟಿ

**ಹಲ್ಲುಜೋಳ
^^ಮಹಾರಾಷ್ಟ್ರದ ಕೊಂಕಣ ಪ್ರದೇಶದ ಒಂದು ಹಳ್ಳಿ




*ಆಂಟಿ, ವಯಸ್ಸಾದ ಮಹಿಳೆಯನ್ನು ಗೌರವದಿಂದ ಸಂಬೋಧಿಸುವಿಕೆ




*ಯುನೈಟೆಡ್ ಸ್ಟೇಟ್ಸ್‌ನ ಪ್ರತಿಷ್ಠಿತ ವಿಶ್ವವಿದ್ಯಾಲಯ

ಸೇರಿನ ನ್ಯಾಯಯುತ ಹಂಚಿಕೆ

# ಬಿಜಯ್ ಕುಮಾರ್ ಕಬಿ




** ಕರಾವಳಿ ಪ್ರದೇಶಗಳಲ್ಲಿ, ಉಪ್ಪು ನೀರಿನಲ್ಲಿ ಬೆಳೆಯುವ ಪೊದೆಗಳು ಮತ್ತು ಮರಗಳ ಗುಂಪು*

*^250kmph ಗಿಂತ ಹೆಚ್ಚಿನ ಗಾಳಿಯ ವೇಗವನ್ನು ಹೊಂದಿರುವ ಭಾರಿ ಚಂಡಮಾರುತ*




*ಸಸ್ಯಸಂಪತ್ತಿಲ್ಲದ ಖಾಲಿ, ಬಳಕೆಯಾಗದ ಭೂಮಿ

^ಭಾರತದಲ್ಲಿ ಪರಿಸರ ಸಂರಕ್ಷಣೆಯನ್ನು ಬೆಂಬಲಿಸುವ ಸಂಸ್ಥೆ




*ಮರಗಳ ತೋಪಿನ ಪಕ್ಕದಲ್ಲಿ ಹರಿಯುವ ನೀರಿನ ಸಣ್ಣ ಒಳಹರಿವು

# ಸಿಲು ನಾಯಕ್













*ಒಡಿಶಾದಲ್ಲಿ

^ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆ













*ಒಡಿಶಾ ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸಸ್

^ಒಡಿಶಾದ ಒಂದು ನಗರ













*ಸಶಸ್ತ್ರ ಪಡೆಗಳ ಜೊತೆಗೆ ಅರೆಸೈನಿಕ ಪಡೆ, ಗಡಿ ಭದ್ರತಾ ಪಡೆ, ಇತ್ಯಾದಿಗಳನ್ನು ಒಳಗೊಂಡಿದೆ

# ಸೇಂಟ್ ತೆರೆಸಾ ಕಾಲೇಜು




*ಒಂದು ಸಾಮಾಜಿಕ ಉದ್ಯಮಶೀಲತಾ ಕ್ಲಬ್

^ಕೇರಳದ ಒಂದು ನಗರ




*ಪರಿಸರ ಸ್ನೇಹಿ ಮತ್ತು ಸುಸ್ಥಿರ

ˆಆಟಿಕೆಗಳ ಪೆಟ್ಟಿಗೆ




*ಗ್ರಾಮೀಣ ಶಿಶುಪಾಲನಾ ಕೇಂದ್ರ
ˆಬಡತನ ನಿರ್ಮೂಲನೆ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಕಾರ್ಯಕ್ರಮ

**ಆರು ವರ್ಷದೊಳಗಿನ ಮಕ್ಕಳು ಮತ್ತು ಅವರ ತಾಯಂದಿರಿಗೆ ಕಲ್ಯಾಣ ಕಾರ್ಯಕ್ರಮ

# ಕಮಲಾ ಮೋಹರಾಣ


ಅದು ಬಿಡುವಿನ ವೇಳೆಯಾಗಿತ್ತು. ಪೂಜಾಳನ್ನು ಹೊರತುಪಡಿಸಿ ಎಲ್ಲಾ ವಿದ್ಯಾರ್ಥಿಗಳು ಆಟ ಆಡುವುದರಲ್ಲಿ ನಿರತರಾಗಿದ್ದರು.
ಈ ಉರುಟುಕಲ್ಲುಗಳನ್ನು ಏಕೆ ಸಂಗ್ರಹಿಸುತ್ತಿದ್ದೀಯಾ, ಪೂಜಾ?
ನಾನು ಇವುಗಳನ್ನು ಒಟ್ಟಿಗೆ ಅಂಟಿಸಿ ಒಂದು ಆಕರ್ಷಕ ಶಿಲ್ಪವನ್ನು ಮಾಡಲು ಬಯಸುತ್ತೇನೆ.
ಅದೊಂದು ಸುಂದರ ಯೋಚನೆ. ಇಂದು, ಈ ತರಗತಿಯಲ್ಲಿ, ಒಡಿಶಾದ ಕಮಲಾ ಮೊಹರಾಣ ಎಂಬ ಇನ್ನೊಬ್ಬ ಸೃಜನಶೀಲ ವ್ಯಕ್ತಿಯ ಕಥೆಯನ್ನು ನಾನು ನಿಮಗೆ ಹೇಳುತ್ತೇನೆ. ಬಿಸಾಡಿದ ಕಾಗದ ಮತ್ತು ಪ್ಲಾಸ್ಟಿಕ್ ಅನ್ನು ಬಳಸಿ ಇವರು ಅದ್ಭುತ ಕಲಾಕೃತಿಗಳಾಗಿ ಪರಿವರ್ತಿಸಿದ್ದಾರೆ.
ಕಮಲಾ ಮೊಹರಾಣಾಗೆ ವಿಚಿತ್ರವಾದ ಹವ್ಯಾಸವಿತ್ತು...
ನೀವು ಇವುಗಳನ್ನು ಏಕೆ ಸಂಗ್ರಹಿಸುತ್ತಿದ್ದೀರಿ, ಅಮ್ಮಾ?
ಚಿಂತಿಸಬೇಡ, ನಾನು ಅವುಗಳನ್ನು ಒಳ್ಳೆಯದಕ್ಕೆ ಬಳಸುತ್ತೇನೆ.
...ಅಥವಾ ನಿಜವಾಗಿ ಇದು ಹೆಚ್ಚಿನವಗೆ ವಿಚಿತ್ರವಾಗಿ ಕಾಣುತ್ತಿತ್ತು.
ಕಮಲಾ, ನೀನೇಕೆ ವೇಸ್ಟ್ ಪೇಪರ್, ಪ್ಲಾಸ್ಟಿಕ್ ಸಂಗ್ರಹಿಸುತ್ತಾ ಇರುತ್ತೀಯ?
ಇದನ್ನು ಮಾಡಲು.
ಈ ಬುಟ್ಟಿ ಸುಂದರವಾಗಿದೆ. ನೀನು ಇದನ್ನು ತ್ಯಾಜ್ಯದಿಂದ ಮಾಡಿದ್ದೀಯ ಎಂಬುದನ್ನು ನನಗೆ ನಂಬಲಾಗುತ್ತಲೇ ಇಲ್ಲ. ನಾನು ಸಹ ಇಂತಹ ವಸ್ತುಗಳನ್ನು ಮಾಡಲು ಬಯಸುತ್ತೇನೆ!


ನೆರೆಹೊರೆಯವರ ಮಾತು ಕಮಲಾಳ ಮನಸ್ಸಿನಲ್ಲಿ ಇದ್ದವು. ಮರುದಿನ-
ನಿಮಗೆ ಆಸಕ್ತಿ ಇದ್ದರೆ, ಬಿಸಲಾಡಿದ ವಸ್ತುಗಳಿಂದ ಬುಟ್ಟಿಗಳು ಮತ್ತು ಇತರ ಉಪಯುಕ್ತ ವಸ್ತುಗಳನ್ನು ಹೇಗೆ ತಯಾರಿಸಬಹುದಂದು ನಾನು ನಿಮಗೆ ಮತ್ತು ಇತರರಿಗೆ ಕಲಿಸಬಹುದು. ಇದು ಆದಾಯದ ಮೂಲವೂ ಆಗಬಹುದು.
ಇದು ಅದ್ಭುತ. ನಾನು ಕಲಿಯಲು ಇಷ್ಟಪಡುತ್ತೇನೆ.
ಸ್ವಲ್ಪ ಸಮಯದಲ್ಲೇ, ಈ ಕೌಶಲ್ಯಗಳನ್ನು ಕಲಿಯಲು ಮಹಿಳೆಯರ ಗುಂಪು ಕಮಲಾ ಬಳಿಗೆ ಬಂದಿತು.
ಮೊದಲಿಗೆ, ನಾವು ಎಲ್ಲಾ ರೀತಿಯ ತಿರಸ್ಕರಿಸಿದ ಪ್ಲಾಸ್ಟಿಕ್ ಮತ್ತು ಕಾಗದಗಳನ್ನು, ಅಂದರೆ, ರ್‍ಯಾಪರ್‌ಗಳು, ಹಾಲಿನ ಪ್ಯಾಕೆಟ್‌ಗಳು ಮತ್ತು ಈ ರೀತಿಯ ಪ್ಲಾಸ್ಟಿಕ್ ಕವರ್‌ಗಳನ್ನು ಸಂಗ್ರಹಿಸಿ ಪ್ರತ್ಯೇಕಿಸೋಣ.
"ನಂತರ, ನಾವು ಅವುಗಳನ್ನು ಚೆನ್ನಾಗಿ ತೊಳೆದು ಒಣಗಿಸುತ್ತೇವೆ ...
"... ನಂತರ, ನಾವು ಅವುಗಳನ್ನು ತೆಳುವಾದ ಪಟ್ಟಿಗಳಾಗಿ ಕತ್ತರಿಸುತ್ತೇವೆ...
"...ಮತ್ತು ಅಂತಿಮವಾಗಿ, ಸುಂದರವಾದ ಬುಟ್ಟಿಯನ್ನು ರೂಪಿಸಲು ನಾವು ಅದನ್ನು ಒಟ್ಟಿಗೆ ನೇಯುತ್ತೇವೆ."
ಮಹಿಳೆಯರು ಬುಟ್ಟಿಗಳನ್ನು ಮಾಡುವುದರ ಜೊತೆಗೆ ಸ್ವಲ್ಪ ಸಮಯದಲ್ಲೇ ಪೆನ್ ಸ್ಟ್ಯಾಂಡ್‌ಗಳು, ಮೊಬೈಲ್ ಫೋನ್ ಸ್ಟ್ಯಾಂಡ್‌ಗಳು, ಹೂವಿನ ಕುಂಡಗಳು, ಹ್ಯಾಂಡ್ ಫ್ಯಾನ್‌ಗಳು ಮತ್ತು ವಾಲ್ ಹ್ಯಾಂಗಿಂಗ್‌ಗಳನ್ನು ತ್ಯಾಜ್ಯ ವಸ್ತುಗಳಿಂದ ತಯಾರಿಸಲು ಪ್ರಾರಂಭಿಸಿದರು.
ಒಂದು ದಿನ-
ಮುಂದಿನ ತಿಂಗಳು ಇಲ್ಲಿ ಜಾತ್ರೆಯೊಂದು ಬರಲಿದೆ. ನಮ್ಮ ಉತ್ಪನ್ನಗಳನ್ನು ಅಲ್ಲಿ ಮಾರಾಟ ಮಾಡಲು ಪ್ರಯತ್ನಿಸೋಣ.
ಕಮಲಾ ಮತ್ತು ಆಕೆಯ ತಂಡ ಆ ಜಾತ್ರೆಯಲ್ಲಿ ಉತ್ತಮ ಲಾಭ ಗಳಿಸಿತು.

*ಜಾತ್ರೆ


ನಂತರ ಕೆಲವೇ ತಿಂಗಳುಗಳಲ್ಲಿ, ಅವರು ತಮ್ಮ ಉತ್ಪನ್ನಗಳನ್ನು ತಮ್ಮ ಹಳ್ಳಿ ಮತ್ತು ಅಕ್ಕಪಕ್ಕದ ಹಳ್ಳಿಗಳ ಜನರಿಗೆ ನಿಯಮಿತವಾಗಿ ಮಾರಾಟ ಮಾಡಲು ಪ್ರಾರಂಭಿಸಿದರು.
ಮುಂದಿನ ತಿಂಗಳು ನನ್ನ ಸೋದರ ಸೊಸೆಯ ಮದುವೆ. ನನಗೆ ಇಂತಹ 20 ಬುಟ್ಟಿಗಳು ಸಿಗಬಹುದೇ?
ಖಂಡಿತಾ, ಎರಡು ವಾರಗಳಲ್ಲಿ ಸಿದ್ಧವಾಗಿರುತ್ತವೆ.
ಸ್ಥಳೀಯ ಸರ್ಕಾರಿ ಆಡಳಿತ ಸಂಸ್ಥೆಗೆ ಈ ಗುಂಪಿನ ಬಗ್ಗೆ ತಿಳಿದಾಗ -
ಕಮಲಾ, ನಿಮ್ಮ ತಂಡವು ಸುಸ್ಥಿರ ಉತ್ಪನ್ನಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ ಉತ್ತಮ ಕೆಲಸವನ್ನು ಮಾಡುತ್ತಿದೆ. ನಿಮ್ಮ ಸ್ವ-ಸಹಾಯ ಗುಂಪು ಹೆಸರೊಂದನ್ನು ಹೊಂದಿದ್ದರೆ, ಅದು ಧನಸಹಾಯವನ್ನು ಸಹ ಪಡೆಯಬಹುದು.
ನಮ್ಮನ್ನು ನಾವು 'ಮಾ ಥಾನಪತಿ' ಎಂದು ಕರೆಯುತ್ತೇವೆ.
ಸರ್ಕಾರಿ ಆಡಳಿತ ಸಂಸ್ಥೆಯ ಸಹಾಯದಿಂದ, ಮಾ ಥಾನಪತಿ ಒಡಿಶಾದಾದ್ಯಂತ ಕ್ರಾಫ್ಟ್ ಮೇಳಗಳಲ್ಲಿ ತನ್ನ ಸರಕುಗಳನ್ನು ಮಾರಾಟ ಮಾಡುತ್ತದೆ.
ಕಮಲಾ ಅಕ್ಕ, ನಿಮಗೆ ಧನ್ಯವಾದಗಳು, ನಾನು ತಿಂಗಳಿಗೆ ಹೆಚ್ಚುಕಡಿಮೆ 6,000 ರೂ. ಗಳಿಸುತ್ತಿದ್ದೇನೆ.
ಹೌದು. ನಾನೇ ಸ್ವತಃ ಹಣ ಸಂಪಾದಿಸುತ್ತೇನೆ ಎಂದು ನಾನು ಯಾವತ್ತೂ ಯೋಚಿಸಿರಲಿಲ್ಲ.
ಮಾ ಥಾನಪತಿ ಈಗ ಗ್ರಾಮದಲ್ಲಿ 28 ರಿಂದ 63 ವರ್ಷ ವಯಸ್ಸಿನ 40 ಮಹಿಳೆಯರಿಗೆ ಜೀವನೋಪಾಯವನ್ನು ಒದಗಿಸುತ್ತಿದೆ.
ಕಮಲಾ ತನ್ನ ಉಪಕ್ರಮವು ಇತರ ಹಳ್ಳಿಗಳಲ್ಲಿಯೂ ಕಾರ್ಯಗತಗೊಳ್ಳುತ್ತದೆ, ಇದರಿಂದಾಗಿ ಅನೇಕರಿಗೆ ಜೀವನೋಪಾಯದ ಮೂಲವನ್ನು ಒದಗಿಸುತ್ತದೆ ಎಂದು ಆಶಿಸುತ್ತಾರೆ.



# ಮನ್ ಕಿ ಬಾತ್

## ಸಂಪುಟ 6

ಇದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್‌ನ ಆರನೆಯ ಸಂಚಿಕೆಯಾಗಿದೆ. ಈ ರೇಡಿಯೊ ಕಾರ್ಯಕ್ರಮವು ದೇಶದ ಮೂಲೆ ಮೂಲೆಗಳಿಂದ ಸಂಗ್ರಹಿಸಿದ ಅಪೂರ್ವ ಘಟನೆ ಮತ್ತು ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತದೆ.

ಕಲ್ಪನಾ, ದೃಷ್ಟಿ ದೋಷವನ್ನು ಹೊಂದಿರುವ ಉತ್ತರಾಖಂಡ ರಾಜ್ಯದ ವಿದ್ಯಾರ್ಥಿ. ತುಂಬಾ ಪ್ರಯತ್ನದ ನಂತರ ಅವಳಿಗೆ ನೆರವಾಗಲು ಅಗತ್ಯ ಸಂಪನ್ಮೂಲಗಳನ್ನು ಹೊಂದಿರುವ ಶಾಲೆಯೊಂದನ್ನು ಹುಡುಕಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ. ಆದರೆ, ಅವಳಿಗೊಂದು ಸಮಸ್ಯೆ ಎದುರಾಗುತ್ತದೆ. ಅದೇನೆಂದರೆ, ಎಲ್ಲ ಪಾಠಗಳು ಕನ್ನಡ ಭಾಷೆಯಲ್ಲಿವೆ. ಕಲ್ಪನಾಳಿಗೆ ಹೊಸ ಬಾಷೆಯಾಗಿದ್ದ ಕನ್ನಡವನ್ನು ಕೇವಲ ಮೂರು ತಿಂಗಳಿನಲ್ಲಿ ಕಲಿಯುವುದಷ್ಟೇ ಅಲ್ಲದೇ ಅದರಲ್ಲಿ 92 ಅಂಕಗಳನ್ನು ಕೂಡ ಗಳಿಸುತ್ತಾಳೆ.

ತೋಂಗ್‌ಬ್ರಾಮ್ ಬಿಜಿಯಶಾಂತಿ, ಮಣಿಪುರದ ಉದ್ಯಮಶೀಲ ಹೆಣ್ಣು ಮಗಳು. ಅವಳಿಗೆ ಕಮಲದ ಹೂವುಗಳೆಂದರೆ ಬಹಳ ಇಷ್ಟ. ಅವಳು ತನ್ನ ಈ ಇಷ್ಟವನ್ನೇ ಬಹಳ ಲಾಭದಾಯಕ ಉದ್ಯಮವನ್ನಾಗಿ ಪರಿವರ್ತಿಸಿಕೊಂಡಿದ್ದಾಳೆ. ಅವಳು ಕಮಲದ ಕಾಂಡದಿಂದ ನಾರನ್ನು ಸಂಗ್ರಹಿಸಿ ಅದರಿಂದ ಕಮಲದ ರೇಷ್ಮೆ ಬಟ್ಟೆಗಳನ್ನು ತಯಾರಿಸುತ್ತಾಳೆ. ಇವುಗಳು ತುಂಬ ಸುಂದರವಾಗಿರುವುದಷ್ಟೇ ಅಲ್ಲದೇ ಸುಸ್ಥಿರವಾದ ಉತ್ಪನ್ನ ಕೂಡ ಆಗಿವೆ.

ಇಸ್ಮಾಯಿಲ್ ಭಾಯ್ ಶೇರು ಗುಜರಾತಿನ ರೈತ ಕುಟುಂಬವೊಂದರಲ್ಲಿ ಜನಿಸಿದವರು. ಅವರ ಕುಟುಂಬದ ಹಿರಿಯರು ಅವರಿಗೆ ತಮ್ಮಂತೆ  ಕುಟುಂಬದ ಕಸುಬಾದ ಬೇಸಾಯವನ್ನು ಮಾಡದೇ, ಬೇರೆ ಯಾವುದಾದರೂ ಕಸುಬನ್ನು ಮಾಡುವಂತೆ ಉಪದೇಶ ಮಾಡುತ್ತಾರೆ. ಆದರೆ, ಇಸ್ಮಾಯಿಲ್ ಭಾಯ್ ಅವರಿಗೆ ಕೃಷಿಯಲ್ಲಿ ತೀವ್ರ ಆಸಕ್ತಿ. ಅವರು ಅದರಲ್ಲೇ ಮುಂದುವರಿದು, ತಮ್ಮ ಪ್ರಯೋಗಶೀಲತೆಯಿಂದಾಗಿ ಅನೇಕ ಉತ್ತಮ ಬೆಳೆಗಳನ್ನು ಬೆಳೆದಿದದ್ದಾರೆ. ಇದು ಅನೇಕರಿಗೆ ಪ್ರೇರಕಶಕ್ತಿಯಾಗಿದೆ.

ನೀವು ಎಲ್ಲೇ ಹುಟ್ಟಿರಲಿ, ಯಾವುದೇ ಸವಾಲುಗಳನ್ನು ಎದುರಿಸುತ್ತಿರಲಿ, ನೀವು ಖಂಡಿತ ಯಶಸ್ಸನ್ನು ಗಳಿಸಬಹುದು ಎಂದು ಈ ಸಂಕಲನದಲ್ಲಿರುವ ಹತ್ತು ಕಥೆಗಳು ತಿಳಿಸುತ್ತವೆ.



₹99

www.amarchitrakatha.com
ISBN 978-81-966921-6-2
9 788196 692162